# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 110/2017**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮುಬಾರಕ್ | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಅಸ್ಲಾಂ | **08.06.2022** |
| **ವಯಸ್ಸು** | ಃ **24 ವರ್ಷ** | |
| **ವೃತ್ತಿ** | ಃ ಕೋಳಿ ಅಂಗಡಿ | **ಪ್ರಾ.ಸಾ. ಃ 22** |
| **ವಾಸಸ್ಥಳ** | ಃ ಕಲ್ಯಾಣಗಿರಿ, ಮೈಸೂರು | **ಚಾ.ಸಾ. ಃ 38** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

*1.* ಈಗ ಸುಮಾರು *5-6* ವರ್ಷಗಳ ಹಿಂದೆ ಬೆಳಗ್ಗೆ *10.00* ರ ವೇಳೆಗೆ ವಿ.ವಿ.ಪುರಂ ಪೊಲೀಸ್ ಠಾಣೆ ಅಧಿಕಾರಿ ಕರೆಸಿದ ಮೇರೆಗೆ ನಾನು ಪೊಲೀಸ್ ಠಾಣೆಗೆ ಹೋಗಿದ್ದೇನೆ. ಕೊಲೆ ಪ್ರಕರಣಕ್ಕೆ ಸಂಬಂದ ಪಟ್ಟಂತೆ ಸಾಕ್ಷಿ ಆಗುವ ಬಗ್ಗೆ ತನಿಖಾಧಿಕಾರಿ ನೋಟೀಸ್ ಕೊಟ್ಟಿದ್ದರು. ಅದೇ ವೇಳೆ ಮತ್ತೊಬ್ಬ ಸಾಕ್ಷಿದಾರರು ಠಾಣೆಯಲ್ಲಿ ಇದ್ದರು. ನನಗೆ ಮತ್ತು ಸದರಿ ವ್ಯಕ್ತಿಗೆ ತನಿಖಾಧಿಕಾರಿ ಘಟನೆ ಬಗ್ಗೆ ಮಾಹಿತಿ ಕೊಟ್ಟಿದ್ದರು. ಅದೇ ವೇಳೆ ಠಾಣೆಯಲ್ಲಿ *5* ಜನ ಆರೋಪಿಗಳನ್ನು ತನಿಖಾಧಿಕಾರಿ ನನಗೆ ತೋರಿಸಿದ್ದರು. ಸದರಿ *5* ಜನ ಆರೋಪಿಗಳು ತಮ್ಮ ತಮ್ಮ ಹೆಸರುಗಳನ್ನು ಹೇಳಿದ್ದರು. ಹೇಮಂತ, ಸಂಜು, ಸಂದೇಶ, ಮೂರ್ತಿ ಮತ್ತು ಧರ್ಮೇಂದ್ರ ಎಂದು ತಿಳಿಸಿದ್ದು ಸದರಿ ಅವರು ಕೊಲೆ ಮಾಡಿದ ಬಗ್ಗೆ ತಿಳಿಸಿದ್ದರು. ಸದರಿ *5* ಜನ ಆರೋಪಿಗಳು ಕೃಷ್ಣ ಅವರನ್ನು ಕೊಲೆ ಮಾಡಲು ಸಂಚು ಮಾಡಿದ ಸ್ಥಳವನ್ನು ತೋರಿಸುವುದಾಗಿ *5* ನೇ ಆರೋಪಿ ಧರ್ಮೇಂದ್ರ ತಿಳಿಸಿದ್ದರು.

*2. (5* ನೇ ಆರೋಪಿಯನ್ನು ಗುರುತಿಸುವ ಬಗ್ಗೆ *5* ನೇ ಆರೋಪಿ ಪರ ವಕೀಲರಿಂದ ಆಕ್ಷೇಪಣೆ ಇಲ್ಲ).

*3. 5* ನೇ ಆರೋಪಿ ತಮ್ಮ ಜೊತೆ ಬಂದರೆ ಲಾಂಗುಗಳನ್ನು ತೋರಿಸುವುದಾಗಿ ಹೇಳಿದ್ದರು. *5* ನೇ ಆರೋಪಿ ಇದ್ದ ಪೊಲೀಸ್ ಜೀಪಿನಲ್ಲಿ ನನ್ನನ್ನು ಕರೆದುಕೊಂಡು ಹೋಗಿದ್ದು, *5* ನೇ

ಆರೋಪಿ ಹೇಳಿದಂತೆ ಕೇರ್ಗಳ್ಳಿ ಯಲ್ಲಿ ಇರುವ ಮನೆಯ ಬಳಿ ಕರೆದುಕೊಂಡು ಹೋಗಿದ್ದರು. *5* ನೇ ಆರೋಪಿ ಸದರಿ ಮನೆಯನ್ನು ತೋರಿಸಿದ್ದು, ತನಿಖಾಧಿಕಾರಿ ಮನೆ ಮಾಲೀಕರ ಬಗ್ಗೆ ವಿಚಾರ ಮಾಡಿದ್ದು ನಾನು, ಮತ್ತೊಬ್ಬ ಸಾಕ್ಷಿದಾರ, ತನಿಖಾಧಿಕಾರಿ ಮತ್ತು *5* ಜನ ಆರೋಪಿಗಳು ಸೇರಿದಂತೆ ಮನೆಯ ಬಳಿ ಇದ್ದು ಮನೆಯ ಮಾಲೀಕರು ಬಂದಿದ್ದು *5* ನೇ ಆರೋಪಿ ಮನೆಯ ಬಾಗಿಲಿನ ಬೀಗವನ್ನು ತೆಗೆದುಕೊಂಡು ಒಳಗೆ ಹೋಗಿದ್ದು ನಾವುಗಳು ಎಲ್ಲರೂ ಸಹ ಮನೆಯ ಒಳಗೆ ಹೋಗಿದ್ದೇವೆ. ಸದರಿ ಮನೆಯ ಹಾಲಿನಲ್ಲಿ ಕುಳಿತು ಕೊಲೆ ಮಾಡಲು ಸಂಚು ಮಾಡಿದ ಸ್ಥಳ ಎಂದು ಆರೋಪಿಗಳು ತೋರಿಸಿದ್ದರು. *5* ನೇ ಆರೋಪಿ ಬ್ಯಾಗಿನಲ್ಲಿ ಸಜ್ಜ ಮೇಲೆ ಲಾಂಗ್ ಗಳನ್ನು ಇಟ್ಟಿರುವುದಾಗಿ ತೆಗೆದು ತೋರಿಸಿದ್ದಾರೆ. *3* ಲಾಂಗ್ ಗಳು ಇತ್ತು. ಈ ಬಗ್ಗೆ ಫೊಟೊಗಳನ್ನು ಪಡೆದು ಮಹಜರ್ ಮಾಡಿದ್ದಾರೆ. ಸದರಿ ಮಹಜರ್ ಅನ್ನು ನಿ.ಪಿ-*90* ಹಾಗೂ ನನ್ನ ಸಹಿಯನ್ನು ನಿ.ಪಿ-*90*(ಎ) ರಂತೆ ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ *6* ಫೋಟೋಗಳನ್ನು ನಿ.ಪಿ-*91* ರಿಂದ *96* ರಂತೆ ಗುರುತಿಸಲಾಯಿತು. ನಿ.ಪಿ-*91, 93* ಮತ್ತು *96* ಫೋಟೊಗಳಲ್ಲಿ ನಾನು ಕಂಡು ಬರುತ್ತೇನೆ. ನಿ.ಪಿ-*91* ರಿಂದ *96* ಫೋಟೊಗಳಲ್ಲಿ *5* ನೇ ಆರೋಪಿ ಕಂಡು ಬರುತ್ತಾರೆ. ನಾನು ಅವರನ್ನು ನೋಡಿ ಗುರುತಿಸಿದ್ದೇನೆ. *2, 3* ಮತ್ತು *4* ನೇ ಆರೋಪಿಗಳನ್ನು ನೋಡಿ ಗುರುತಿಸಿದ್ದೇನೆ. ನಿ.ಪಿ-*91, 92* ಮತ್ತು *93* ಫೋಟೊಗಳಲ್ಲಿ ಎಲ್ಲಾ ಆರೋಪಿಗಳು ಕಂಡು ಬರುತ್ತಾರೆ.

*4.* (ಬಟ್ಟೆಯಿಂದ ಸೀಲ್ ಮಾಡಿದ ಪಾಕೆಟ್ ಅನ್ನು ಅನುಮತಿ ಮೇರೆಗೆ ತೆಗೆಯಲಾಯಿತು) ನನಗೆ ತೋರಿಸಿದ ನೀಲಿ ಬಣ್ಣದ ರೆಕ್ಸಿನ್ ಬ್ಯಾಗ್ ಅನ್ನು ಎಂ.ಒ-*23* ರಂತೆ ಗುರುತಿಸಲಾಯಿತು. (ಬಟ್ಟೆಯಿಂದ ಸೀಲ್ ಮಾಡಿದ ಪಾಕೆಟ್ ಅನ್ನು ಅನುಮತಿ ಮೇರೆಗೆ ತೆಗೆಯಲಾಯಿತು) ಬಟ್ಟೆಯಿಂದ ಸೀಲ್ ಮಾಡಿದ ಪಾಕೆಟ್ ಮೇಲೆ ನಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಲಾಗಿದೆ *3* ಲಾಂಗ್ ಗಳನ್ನು ಎಂ.ಒ-*24, 25* ಮತ್ತು *26* ರಂತೆ ಗುರುತಿಸಲಾಯಿತು. ಸ್ಥಳದಲ್ಲಿ ಬರೆದ ಅಮಾನತ್ತು ಮಹಜರ್ ಗೆ ಸಹಿಗಳನ್ನು ಪಡೆದು ಲಾಂಗ್ ಗಳನ್ನು ಮತ್ತು ರೆಕ್ಸಿನ್ ಬ್ಯಾಗ್ ಗಳನ್ನು ವಶಕ್ಕೆ ಪಡೆದು ಠಾಣೆಗೆ ವಾಪಸ್ಸು ಬಂದು ನನ್ನ ಹೇಳಿಕೆ ಪಡೆದಿದ್ದಾರೆ. ಲಾಂಗ್ ಗಳನ್ನು ಕೊಲೆ ಮಾಡುವ ಉದ್ದೇಶದಿಂದ ಸ್ಥಳದಲ್ಲಿ ಇಟ್ಟಿದ್ದ ಬಗ್ಗೆ ಹೇಳಿದ್ದರು.

***SC No. 110/2017***
***PW-22***

**<u>ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಎನ್.ಬಿ ರವರಿಂದಃ-</u>**

*5.* ಯಾವ ಅಕ್ಷರದಿಂದ ಲಾಂಗ್ ಗಳನ್ನು ಮತ್ತು ರೆಕ್ಸಿನ್ ಬ್ಯಾಗ್ ಅನ್ನು ಸೀಲ್ ಮಾಡಲಾಗಿತ್ತು ಎಂದು ಗೊತ್ತಿಲ್ಲ. ತನಿಖಾಧಿಕಾರಿ ಮಹಜರ್ ನ ಅಂಶಗಳನ್ನು ಓದಿ ಹೇಳಿದ್ದು ನಾನು ಕೇರ್ಗಳ್ಳಿ ಮನೆಯಲ್ಲಿ ಸಹಿ ಮಾಡಿದ್ದೇನೆ. ರೆಕ್ಸಿನ್ ಬ್ಯಾಗ್ ಅನ್ನು ಮತ್ತು *3* ಲಾಂಗ್ ಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿದ ಬಗ್ಗೆ ನಿ.ಪಿ-*90* ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. ಈ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ರೆಕ್ಸಿನ್ ಬ್ಯಾಗ್ ಅನ್ನು ಮತ್ತು *3* ಲಾಂಗ್ ಗಳನ್ನು ಕೇರ್ಗಳ್ಳಿ ಮನೆಯಲ್ಲಿ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ರೆಕ್ಸಿನ್ ಬ್ಯಾಗ್ ಅನ್ನು ಮತ್ತು *3* ಲಾಂಗ್ ಗಳನ್ನು ಪೊಲೀಸ್ ಠಾಣೆಯಲ್ಲಿ ಸೃಷಿಸಿ ಫೋಟೊಗಳನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ಘಟನೆ ಮೊದಲು ಮೃತ ಕೃಷ್ಣನ ಬಗ್ಗೆ ಗೊತ್ತಿಲ್ಲ. ಮೃತನ ಸಂಬಂಧಿ ಶ್ರೀ.ಕುಮಾರ ಚಾ.ಸಾ-*22* ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ತಾನು ಸ್ವತಹ ಬಂದಿರುವುದಾಗಿ ನುಡಿಯುತ್ತಾರೆ. ನಾನು ಕೃಷ್ಣ ಅವರ ಹಿಂಬಾಲಕರ ಸದಸ್ಯ ಇದ್ದೇನೆ ಎಂದರೆ ಸರಿಯಲ್ಲ. ಅಂದು *1* ರಿಂದ *5* ಆರೋಪಿಗಳು ಧರಿಸಿದ್ದ ಬಟ್ಟೆಯ ಬಗ್ಗೆ ಹೇಳಲು ನೆನಪಿಲ್ಲ. *5* ಜನ ಆರೋಪಿಗಳು ಇದ್ದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. *5* ಜನ ಆರೋಪಿಗಳನ್ನು ಪೊಲೀಸ್ ಠಾಣೆಯಲ್ಲಿ ತೋರಿಸಿದ್ದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. *5* ಜನ ಆರೋಪಿಗಳು ತಮ್ಮ ಹೆಸರನ್ನು ಹೇಳಿ ತಾವು ಕೊಲೆ ಮಾಡಿದ ಬಗ್ಗೆ ಹೇಳಿದನ್ನು ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. *5* ಜನ ಆರೋಪಿಗಳು ಸೇರಿ ಸಂಚು ಮಾಡಿದ ಬಗ್ಗೆ *5* ನೇ ಆರೋಪಿ ತಿಳಿಸಿದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿದ್ದಾರೆ.

ನಾನು ಜೀಪಿನಲ್ಲಿ ಹೋಗಿದ್ದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. ಮತ್ತೊಂದು ಜೀಪಿನಲ್ಲಿ *5* ಜನ ಹೋಗಿದ್ದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿಲ್ಲ. ತನಿಖಾಧಿಕಾರಿ ಮನೆ ಮಾಲೀಕರನ್ನು ವಿಚಾರ ಮಾಡಿದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. *5* ನೇ ಆರೋಪಿ

ಮನೆಯ ಬಾಗಿಲಿನ ಬೀಗವನ್ನು ತೆಗೆದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿದ್ದಾರೆ. ಸದರಿ ಬೀಗದ ಕೀ *5* ನೇ ಆರೋಪಿಗೆ ಹೇಗೆ ಬಂದಿತ್ತು ಎಂದು ಗೊತ್ತಿಲ್ಲ. *5* ಜನ ಆರೋಪಿಗಳಿಗೆ ಸಂಬಂಧ ಪಟ್ಟ ಯಾವುದೇ ವಸ್ತುಗಳು ಸದರಿ ಮನೆಯಲ್ಲಿ ಇದ್ದ ಬಗ್ಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಮನೆ ಬಳಕೆ ವಸ್ತುಗಳು ಇದ್ದ ಬಗ್ಗೆ ನಾನು ಗಮನಿಸಿಲ್ಲ. ಸದರಿ ಮನೆಯಲ್ಲಿ ಬೇರೆ ವ್ಯಕ್ತಿಗಳು ವಾಸ ಇರಲಿಲ್ಲ. ಸದರಿ ಮನೆಯ ಮಾಲೀಕರ ಹೊರತಾಗಿ ಅಕ್ಕ ಪಕ್ಕದ ವ್ಯಕ್ತಿಗಳನ್ನು ತನಿಖಾಧಿಕಾರಿ ಕರೆಸಿಲ್ಲ. ಸದರಿ ಮನೆಯಲ್ಲಿ ಇದ್ದ ಬೇರೆ ವಸ್ತುಗಳ ಪಟ್ಟಿಯನ್ನು ತನಿಖಾಧಿಕಾರಿ ತಯಾರು ಮಾಡಿದ ಬಗ್ಗೆ ಗೊತ್ತಿಲ್ಲ. ಮನೆಯಿಂದ ವಾಪಸ್ಸು ಬರುವಾಗ ಮನೆಗೆ ಬೀಗ ಹಾಕಿ ಸೀಲು ಮಾಡಲಾಯಿತು. ಮನೆಗೆ ಬೀಗ ಹಾಕಿ ಸೀಲು ಮಾಡಿದ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿಲ್ಲ. *1* ರಿಂದ *5* ನೇ ಆರೋಪಿಗಳು ಕೇರ್ಗಳ್ಳಿ ಮನೆಗೆ ಕರೆದುಕೊಂಡು ಹೋಗಿಲ್ಲ ಮತ್ತು ಯಾವುದೇ ವಸ್ತುಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

*6.* ಫೋಟೊಗಳನ್ನು ಪೊಲೀಸರು ತೆಗೆದಿದ್ದು ಹೆಸರು ಗೊತ್ತಿಲ್ಲ. ಫೋಟೊಗಳನ್ನು ಮೊಬೈಲ್ ಮತ್ತು ಕ್ಯಾಮಾರದಲ್ಲಿ ಪಡೆದಿದ್ದಾರೆ. ನಿ.ಪಿ-*91* ರಿಂದ *96* ರಂತೆ ಗುರುತಿಸಿದ ಫೋಟೊಗಳನ್ನು ಮೊಬೈಲ್ ನಿಂದ ಅಥವಾ ಕ್ಯಾಮಾರದಿಂದ ತೆಗೆದಿದ್ದಾರೆ ಎಂದು ಹೇಳಲು ಬರುವುದಿಲ್ಲ. ಫೋಟೊಗಳನ್ನು ತೆಗೆದ ಸಮಯ ನೆನಪಿಲ್ಲ. ಮೃತ ಕೃಷ್ಣ ಅವರ ಗುಂಪಿನ ಒತ್ತಡದ ಮೇರೆಗೆ ಪೊಲೀಸ್ ಅಧಿಕಾರಿ ಬೇರೆ ಸಂಬಂಧ ಇಲ್ಲದ ಮನೆಗೆ ಕರೆದುಕೊಂಡು ಹೋಗಿ ಫೋಟೊಗಳನ್ನು ತೆಗೆದು ಸೃಷಿಸಿ ಪೊಲೀಸ್ ಠಾಣೆಯಲ್ಲಿ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿದ ಬಗ್ಗೆ ಫೋಟೊಗಳಲ್ಲಿ ಕಂಡು ಬರುವುದಿಲ್ಲ. ನನಗೆ ಘಟನೆ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ-*22* ಶ್ರೀ.ಕುಮಾರ ಅವರ ಹೇಳಿಕೆಯಂತೆ ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಪೊಲೀಸರು ಕೈ ಯಲ್ಲಿ ಬರೆದುಕೊಂಡಿದ್ದಾರೆ ಅಧಿಕಾರಿ ಹೆಸರು ಗೊತ್ತಿಲ್ಲ. ನನಗೆ ಘಟನೆ ಬಗ್ಗೆ ಮಾಹಿತಿ ಇಲ್ಲದೇ ಶ್ರೀ. ಅವ್ವ ಮಾದೇಶ ಅವರ ಒತ್ತಡದ ಮೇರೆಗೆ ಸುಳ್ಳು ಸಾಕ್ಷಿ

ಹೇಳಿದ್ದೇನೆ ಎಂದರೆ ಸರಿಯಲ್ಲ. ಎಂ.ಒ-*23* ರಿಂದ *26* ಕ್ಕೂ ಆರೋಪಿಗಳಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಉಳಿದ ಆರೋಪಿಗಳ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.**

***ಮರು ವಿಚಾರಣೆ:- ಇಲ್ಲ.***

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು